ಪ್ರವಾಸಿ ಕೇಂದ್ರಗಳ ಅಭಿವೃದ್ಧಿ

25 (187) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) (ಮಾನ್ಯ ವಿಧಾನ ಸಭೆಯ ಸದಸ್ಯರು.): ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸಿ ಕೇಂದ್ರಗಳೆಂದು ಗುರುತಿಸಿದ ಸ್ಥಳಗಳಾವುವು; ಈ ಬಗ್ಗೆ ಸರ್ಕಾರದ ನಿರ್ದೇಶನಗಳನ್ವಯ ಮಾಸ್ಟರ್ ಪ್ಲಾನ್ ರಚಿಸಲಾಗಿದೆಯೇ (ವಿವರ ನೀಡುವುದು);

ಆ) ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಲ್ಲಿನ ಪ್ರವಾಸಿ ಕೇಂದ್ರಗಳನ್ನು ಸಂಪರ್ಕಿಸುವ ಯಾವ ರಸ್ತೆಗಳಿಗಾಗಿ ಇಲಾಖೆ ವತಿಯಿಂದ ವಿಶೇಷ ಅನುದಾನ ನಬಾರ್ಡ್ ಯೋಜನೆಯಲ್ಲಿ ಒದಗಿಸಲಾಗಿದೆ (ರಸ್ತೆವಾರು ವಿವರ ನೀಡುವುದು);

ಇ) ಗ್ರಾಮಾಂತರ ಪ್ರವಾಸೋದ್ಯಮ ಯೋಜನೆಯಡಿ ಶಿವಮೊಗ್ಗ ತಾಲ್ಲೂಕು ಕೂಡ್ಲಿ ಪ್ರವಾಸಿ ಕೇಂದ್ರವನ್ನು ಅಭಿವೃದ್ಧಿಪಡಿಸಲು 10.00 ಕೋಟಿ ವೆಚ್ಚ ನೀಲ ನಕಾಶೆ ಯೋಜನೆಯನ್ನು ಜಾರಿಗೆ ತರಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಜಿ. ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು):–

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಈ ಕೆಳಕಂಡ ಸ್ಥಳಗಳನ್ನು ಪ್ರವಾಸಿ ತಾಣಗಳೆಂದು ಗುರುತಿಸಲಾಗಿದೆ.

ಕೂಡಲಿ, ಗಾಜನೂರು, ತ್ಯಾವರೆಕೊಪ್ಪ ಸಿಂಹಧಾಮ, ತೀರ್ಥಹಳ್ಳಿ, ಕವಲೇದುರ್ಗ, ಆಗುಂಬೆ, ಮಂದಗದ್ದೆ ಪಕ್ಷಿಧಾಮ, ಕುಂದಾದ್ರಿ, ಮಾರೀಚಮೃಗವಧೆ, ಅಂಬುತೀರ್ಥ, ಅಮ್ಮನಘಟ್ಟ, ನಗರ, ಹುಂಚ, ಕೊಡಚಾದ್ರಿ, ತಳಕಳಲೆ ಡ್ಯಾಂ, ಇಕ್ಕೇರಿ, ಜೋಗ್ ಫಾಲ್ಸ್, ವರದಮೂಲ, ಕೆಳದಿ, ಭದ್ರಾ ಡ್ಯಾಂ, ಭದ್ರಾವತಿ, ಸಿಗಂದೂರು, ಹೊನ್ನೆಮರಡು, ಶಿಕಾರಿಪುರ, ತುಗರ್ಸಿ, ಉಡುತಡಿ, ಬಳ್ಳಿಗಾವಿ, ಸೊರಬ ಮತ್ತು ಚಂದ್ರಗುತ್ತಿ

ಹೌದು. ಮಾಸ್ಟರ್ ಪ್ಲಾನ್ ತಯಾರಿಸಲಾಗಿದೆ.

ಆ) ಶಿವಮೊಗ್ಗ ಗ್ರಾಮಾಂತರ ಪ್ರದೇಶದಲ್ಲಿನ ಪ್ರವಾಸಿ ಕೇಂದ್ರಗಳನ್ನು ಸಂಪರ್ಕಿಸುವ ರಸ್ತೆಗಳನ್ನು ನಬಾರ್ಡ್ ಯೋಜನೆಯಲ್ಲಿ ಅಭಿವೃದ್ಧಿಪಡಿಸಲು ಕೈಗೆತ್ತಿಕೊಂಡಿರುವುದಿಲ್ಲ.

ಇ) ಶಿವಮೊಗ್ಗ ಜಿಲ್ಲೆಯ ಮೆಗಾ ಸರ್ಕ್ಯೂಟ್ ಯೋಜನೆಯಲ್ಲಿ ಕೂಡಲಿ ಕ್ಷೇತ್ರದಲ್ಲಿ ಉಪಹಾರ ಗೃಹ, ಸ್ನಾನಘಟ್ಟದ ಮೆಟ್ಟಿಲುಗಳ ಅಭಿವೃದ್ಧಿ ವಾಹನ ನಿಲುಗಡೆ ಸ್ಥಳ ಅಭಿವೃದ್ಧಿ, ಫೆನ್ಸಿಂಗ್ ಮಾಡುವುದು, ಬಟ್ಟೆ ಬದಲಾಯಿಸುವ

ಕೊಠಡಿಗಳು ಮತ್ತು ಇತರೆ ಕಾಮಗಾರಿಗಳನ್ನು ರೂ.223.89 ಲಕ್ಷಗಳ ಅಂದಾಜಿನಲ್ಲಿ ಕೈಗೆತ್ತಿಕೊಳ್ಳಲು 'ಯೋಜನಾ ವರದಿಯಲ್ಲಿ ಸೇರಿ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯಕ್ಕೆ ಪ್ರಸ್ತಾವನೆ' ಸಲ್ಲಿಸಲಾಗಿದೆ.

ಇದರ ಜೊತೆಗೆ 2011–12ನೇ ಸಾಲಿನಲ್ಲಿ ಈ ಕ್ಷೇತ್ರದಲ್ಲಿ ರೂ.50.00 ಲಕ್ಷಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ರಾಜ್ಯ ಕ್ರಿಯಾ ಯೋಜನೆಯಲ್ಲಿ ಸೇರಿಸಲಾಗಿದೆ.

ಶ್ರೀ ಕೆ.ಜಿ.ಕುಮಾರಸ್ವಾಮಿ: ಶಿವಮೊಗ್ಗ ಜಿಲ್ಲೆಯಲ್ಲಿ ತುಂಗಭದ್ರ ನದಿಗಳು ಹರಿಯುತ್ತವೆ. ಆ ಎರಡು ನದಿಗಳು ಕೂಡುವಂಥ ಸಂಗಮ ಕ್ಷೇತ್ರವಿದ್ದು ಅಲ್ಲಿ ಶೈವ, ವೈಷ್ಣವ ಧರ್ಮ ಮತ್ತು ಭೂತರಾಯನ ಪುಣ್ಯ ಕ್ಷೇತ್ರಗಳಿವೆ. ಪುರಾತನ ಕಾಲದಿಂದಲೂ ಈ ಪುಣ್ಯ ಕ್ಷೇತ್ರಗಳಲ್ಲಿ ಬಹಳಷ್ಟು ಜನ ದೇಶವಿದೇಶದಿಂದ ಬಂದು ಸ್ನಾನಮಾಡುತ್ತಾರೆ. ಅದು ಒಂದು ಒಳ್ಳೆಯ ಪ್ರವಾಸಿ ಕೇಂದ್ರವೂ ಹೌದು. ಅಲ್ಲಿಯ ಅಭಿವೃದ್ಧಿಗಾಗಿ 10 ಕೋಟಿ ರೂಪಾಯಿಗೆ ಪ್ರಸ್ತಾವನೆಯನ್ನು ನಾನು ಮಾನ್ಯ ಸಚಿವರಿಗೆ ಕಳೆದ ಎರಡು ವರ್ಷದ ಹಿಂದೆ ಸಲ್ಲಿಸಿದ್ದೆ. ಆದರೆ 223 ಲಕ್ಷಕ್ಕೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಪ್ರತಿ ಸೋಮವಾರ ಮತ್ತು ಶಿವರಾತ್ರಿಯಂದು ಲಕ್ಷಾಂತರ ಜನರು ಅಲ್ಲಿಗೆ ಬರುವುದರಿಂದ ಮೂಲಭೂತ ಸೌಕರ್ಯದ ಅಗತ್ಯತೆ ಬಹಳ ಇದೆ. ಅದನ್ನು ಕೂಡಲೆ ಒದಗಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜಿ. ಜನಾರ್ಧನ ರೆಡ್ಡಿ:– ಮಾನ್ಯ ಅಧ್ಯಕ್ಷರೆ, ನಮ್ಮ ಶಿವಮೊಗ್ಗ ಜಿಲ್ಲೆಯನ್ನು tourismನಲ್ಲಿ mega circuit ಎಂದು ಮಾಡಿ, ಸುಮಾರು 100 ಕೋಟಿ ರೂ.ಗಳ ವೆಚ್ಚದಲ್ಲಿ ಈಗಾಗಲೇ ಒಂದು ಯೋಜನೆಯನ್ನು ರೂಪಿಸಿ, ಅದನ್ನು ಕೇಂದ್ರ ಸರ್ಕಾರಕ್ಕೆ ನಾವು ಕಳುಹಿಸಿದ್ದೇವೆ. ಅದರಲ್ಲಿ ಕೂಡಲಿ ಕ್ಷೇತ್ರಕ್ಕೆ 223 ಲಕ್ಷ ರೂ.ಗಳ amount ಅನ್ನು ಸೀಮಿತ ಮಾಡಿದ್ದಾರೆ. ಈ ವರ್ಷದ ಬಜೆಟ್‌ನಲ್ಲಿ 50 ಲಕ್ಷ amount ಈಗಾಗಲೇ ಸಿದ್ಧವಾಗಿದೆ. ಆ 50 ಲಕ್ಷ ರೂ.ಗಳನ್ನು ಉಪಯೋಗಿಸಿ, ನದಿ ತೀರದಲ್ಲಿ ಸ್ನಾನ ಘಟ್ಟಕ್ಕೆ ಅವಶ್ಯಕತೆ ಇರುವಂತಹ ಕೆಲಸಗಳನ್ನು ತಾವು take up ಮಾಡಬಹುದು. ಅಷ್ಟರೊಳಗೆ ಈ amount ಕೂಡ ಬರುತ್ತದೆ. ಇನ್ನು ತಾವೇನಾದರೂ special ಆಗಬೇಕು ಎಂದು ಹೇಳಿದರೆ, ಈ 223 ಲಕ್ಷ ರೂ.ಗಳಲ್ಲದೆ, ಇನ್ನೂ 50 ಲಕ್ಷ ರೂ.ಗಳನ್ನು ಒದಗಿಸಿ ಕೊಡುತ್ತೇನೆ.

ಶ್ರೀ ಕೆ.ಜಿ.ಕುಮಾರಸ್ವಾಮಿ:– ಇದಕ್ಕಾಗಿ ನಾನು ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕಳೆದ ಬಾರಿ ಬಹಳಷ್ಟು ಜನ ಹೆಣ್ಣುಮಕ್ಕಳು ಅಲ್ಲಿ ಸ್ನಾನ ಮಾಡುತ್ತಿರುವ ಸಂದರ್ಭದಲ್ಲಿ ಅಲ್ಲಿ ಯಾವುದೇ ಮರೆ ಕೂಡ ಮಾಡಿರಲಿಲ್ಲ. ಆದಷ್ಟು ಬೇಗನೇ ಇದು ಆಗಬೇಕು. ಜಾಸ್ತಿ ಸ್ನಾನ ಘಟ್ಟಗಳಲ್ಲಿ ಹೆಣ್ಣುಮಕ್ಕಳಿಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಪ್ರಶ್ನೆ ಸಂಖ್ಯೆ: 26 [172]

ಅಧ್ಯಕ್ಷರು:– ಮಾನ್ಯ ರವಿ ಸುಬ್ರಹ್ಮಣ್ಯರವರೆ, ತಮ್ಮ ಪ್ರಶ್ನೆಯನ್ನು ವರ್ಗಾವಣೆ ಮಾಡಲಾಗಿದೆ.

ಪ್ರಶ್ನೆ ಸಂಖ್ಯೆ: 27 [51]

[ಮಾನ್ಯ ಸದಸ್ಯರು ಗೈರುಹಾಜರಾಗಿದ್ದರು]

ಪ್ರಶ್ನೆ ಸಂಖ್ಯೆ: 28 [50]

[ಮಾನ್ಯ ಸದಸ್ಯರು ಗೈರುಹಾಜರಾಗಿದ್ದರು]

ಗರಡಿ ಮನೆ ಹಾಗೂ ಈಜುಕೊಳ ನಿರ್ಮಿಸುವುದು

30 (01) ಶ್ರೀ ಅಪ್ಪಾ ಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ): ಮಾನ್ಯ ಪ್ರವಾಸೋದ್ಯಮ, ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ಬಿಜಾಪುರ ಜಿಲ್ಲೆಯ ಕ್ರೀಡಾಪಟುಗಳು ವಿವಿಧ ಕ್ರೀಡೆಗಳಲ್ಲಿ ರಾಜ್ಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಗಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಜಿಲ್ಲೆಯ ಕ್ರೀಡಾಪಟುಗಳಿಗೆ ಸೂಕ್ತ ತರಬೇತಿ ಹೊಂದಲು ಬಿಜಾಪುರದಲ್ಲಿ "ಗರಡಿ ಮನೆ" ಮತ್ತು "ಈಜುಕೊಳ" ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ?

ಇ) ಹಾಗಿದ್ದಲ್ಲಿ "ಗರಡಿ ಮನೆ" ಹಾಗೂ "ಈಜುಕೊಳ" ನಿರ್ಮಾಣ ಮಾಡಲು ಸರ್ಕಾರವು ಕೈಗೊಂಡಿರುವ ಯೋಜನೆಗಳೇನು? ಯಾವಾಗ ಮಂಜೂರಾತಿ ನೀಡಲಾಗುವುದು?

ಈ) ಬಿಜಾಪುರ ಜಿಲ್ಲೆಯ ವಿವಿಧ ಕ್ರೀಡೆಗಳ ಕ್ರೀಡಾಪಟುಗಳಿಗೆ ಯಾವ ಯಾವ ಸೌಲಭ್ಯಗಳನ್ನು ಸರ್ಕಾರ ಒದಗಿಸಿದೆ (ವಿವರ ನೀಡುವುದು);

ಶ್ರೀ ಜಿ. ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು):